ನೌಕರರ ವರ್ಗಾವಣೆಯ ಹೊಸ ನೀತಿ ಒಳಗೊಂಡಿದೆ. ಸದರಿ ಆದೇಶದಲ್ಲಿ ವಿಧಿಸಿರುವಂತೆ ಒಂದೇ ಸ್ಥಳದಲ್ಲಿ ಕನಿಷ್ಟ 7 ವರ್ಷಗಳ ಕಾಲ 'ಡಿ' ದರ್ಜೆ ನೌಕರರು ಇರಬಹುದು. ಆದರೆ, 7 ವರ್ಷಗಳು ಮೀರಿ ಅವರನ್ನು ಒಂದೇ ಸ್ಥಳದಲ್ಲಿ ಮುಂದುವರೆಸಬಹುದು. ಅವರ ವರ್ಗಾವಣೆಯನ್ನು ಮಾಡುವ ಸಕ್ಷಮ ಪ್ರಾಧಿಕಾರ ಸಂಬಂಧಪಟ್ಟ ವ್ಯಾಪ್ತಿಯ ನಿರ್ವಹಣಾ ಪ್ರಾಧಿಕಾರವು ಆಗಿರುತ್ತದೆ.

ನಾಗಮಂಗಲ ತಾಲ್ಲೂಕಿನ ಪಟ್ಟಣ ಪಂಚಾಯಿತಿಯಲ್ಲಿ ಅಕ್ರಮವಾಗಿ ಹಕ್ಕು ಪತ್ರ ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 925(1475)

ಸದಸ್ಯರ ಹೆಸರು: ಶ್ರೀ ಎನ್.ಚಲುವರಾಯ ಸ್ವಾಮಿ(ನಾಗಮಂಗಲ)

ಪ್ರಶ್ನೆ

1) ನಾಗಮಂಗಲ ತಾಲ್ಲೂಕಿನ ಪಟ್ಟಣ ಪಂಚಾಯತಿಯು ಅಕ್ರಮವಾಗಿ ಹಕ್ಕುಪತ್ರಗಳನ್ನು ವಿತರಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರವು ಕ್ರಮ ಕೈಗೊಳ್ಳದಿರಲು ಕಾರಣವೇನು?

ಉತ್ತರಿಸುವ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಉತ್ತರ

1) ನಾಗಮಂಗಲ ಪಟ್ಟಣ ಪಂಚಾಯತಿಗೆ ಸೇರಿದ ಸರ್ವೆ ನಂ197 ಹಾಗೂ 198ರಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವವರ ಬಗ್ಗೆ ಸರ್ಕಾರದ ಸೂಚನೆಯಂತೆ ಸರ್ವೆ ಮಾಡಿಸಿ ಸದರಿ ಸರ್ವೆ ಪಟ್ಟಿಯಂತೆ ಹಾಲಿ ವಾಸಿಸುತ್ತಿರುವ ಜನರಿಗೆ ನಿವೇಶನಗಳನ್ನು ನೀಡಲು ನಾಗಮಂಗಲ ಪಟ್ಟಣ ಪಂಚಾಯತಿಯು ದಿನಾಂಕ:6-11-2001ರಂದು ಸಭೆ ಸೇರಿ ಬಹುಮತದೊಂದಿಗೆ ಪ್ರಸ್ತಾಪಿತ ಸರ್ವೆ ನಂಬರ್‌ನಲ್ಲಿ ವಾಸಿಸುತ್ತಿದ್ದ ಜನರಿಗೆ ನಿವೇಶನವನ್ನು ನೀಡುವ ನಿರ್ಣಯವನ್ನು ಕೈಗೊಳ್ಳಲಾಯಿತು. ಸದರಿ ನಿರಾಶ್ರಿತರು ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದರಿಂದ ಪಟ್ಟಣ ಪಂಚಾಯತಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ 219 ಜನರಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆ. ಮುಷ್ಕರನಿರತರು ಸಹ ತಮ್ಮ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಂಡಿರುತ್ತಾರೆ. ಸರ್ಕಾರದ ಸೂಚನೆಯ ಮೇರೆಗೆ ಹಾಗೂ ಪಟ್ಟಣ ಪಂಚಾಯತಿ ಸರ್ವಾನುಮತದಿಂದ ನಿರ್ಣಯ ತೆಗೆದುಕೊಂಡಿರುವುದರಿಂದ ಈ ನಿಟ್ಟಿನಲ್ಲಿ ಯಾವ ಮೇಲೂ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.